# ನಗರಸಭಾ ಕಾರ್ಯಾಲಯ, ಹರಿಹರ.

ಸಂಖ್ಯೆ:ಐ.ಡಿ.ಎಸ್.ಎಂ.ಟಿ.: ಸಿ.ಆರ್:120:05:06 ದಿನಾಂಕ:04/12/2006

## "ಮರು ಟೆಂಡರ್ ಕಂ. ಹರಾಜು ಇಸ್ತಿ ಹಾರ್"

ಈ ಮೂಲಕ ಸಮಸ್ತ ನಾಗರೀಕರಿಗೆ ಪ್ರಕಟಿಸುವುದೇನೆಂದರೆ, ನಗರಸಭೆಗೆ ಸೇರಿದ ಗಾಂಧಿ ವೃತ್ತದ ಬಳಿ ಇರುವ ಐ.ಡಿ.ಎಸ್.ಎಂ.ಟಿ. ವಾಣಿಜ್ಯ ಸಂಕೀರ್ಣ ನೆಲ ಅಂತಸ್ತಿನ ಮಳಿಗೆ ನಂ: 1ರಿಂದ 14 ಮಿನಿ ಮಳಿಗೆಗಳು ಹಾಗೂ ನೆಲ ಅಂತಸ್ತಿನ ದೊಡ್ಡ ಅಳತೆಯ ಮಳಿಗೆ ನಂಬರ್ 13,15, ಮತ್ತು 1ನೇ ಮಹಡಿಯಲ್ಲಿನ ದೊಡ್ಡ ಅಳತೆಯ ಮಳಿಗೆ ನಂ. 1ರಿಂದ 6 ರವರೆಗೆ ಮಳಿಗೆಗಳು ನಗರಸಭೆ ಮುಂಭಾಗದ ಐ.ಡಿ.ಎಸ್.ಎಂ.ಟಿ. ಮಳಿಗೆ ನಂ. 1ಬಿ ನ್ನು ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂ: ಪೌನಿ:ಐ.ಡಿ.ಎಸ್.ಎಂ.ಟಿ : ಸಿಆರ್. 26/04-05 ದಿನಾಂಕ 25/04/2005 ರಂತೆ 20 ವರ್ಷಗಳ ಅವಧಿಗೆ ಟೆಂಡರ್ ಕಮ್ ಹರಾಜು ಮೂಲಕ ಮಾಹೆಯಾನ ಬಾಡಿಗೆಗೆ ಗುತ್ತಿಗೆ ನೀಡಲಾಗುತ್ತದೆ. ಇಷ್ಟವುಳ್ಳವರು ಪ್ರತಿ ಮಳಿಗೆಯ ಮೂಲ ಬಂಡವಾಳ ಬೆಲೆಯ ಹಾಗೂ ಕಟ್ಟಡದ ನಿರ್ಮಾಣದ ವೆಚ್ಚದ ಶೇ.7.5 ಕ್ಕಿಂತ ಕಡಿಮೆ ಇಲ್ಲದಂತೆ ಮಾಹೆಯಾನ ಬಾಡಿಗೆಯನ್ನು ನಿಗಧಿಪಡಿಸಿದ್ದರಿಂದ ಟೆಂಡರ್‌ನಲ್ಲಿ ಹಿಂದಿರುಗಿಸಲಾಗದ ಪ್ರೀಮಿಯಂ ಮೊತ್ತವನ್ನು ನಮೂದಿಸಿದ ವಿವರಗಳನ್ನು ಕವರಿನಲ್ಲಿರಿಸಿ ಕವರಿನ ಮೇಲೆ ಮಳಿಗೆ ವಿವರವನ್ನು ನಮೂದಿಸಿ ಲಕೋಟೆಗಳನ್ನು ಸೀಲ್ಡ್ ಮಾಡಿ ಪೌರಾಯುಕ್ತರು ನಗರಸಭೆ ಹರಿಹರ ಇವರ ಹೆಸರಿಗೆ **ದಿನಾಂಕ:04/01/2007 ಬೆಳಿಗ್ಗೆ 10 ಘಂಟೆ** ಒಳಗಾಗಿ ತಲುಪಿಸತಕ್ಕದ್ದು. ಅವಧಿ ನಂತರ ಬಂದ ಯಾವುದೇ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್ ಕವರಿನ ಮೇಲೆ ಠೇವಣಿ ಹಣಕ್ಕೆ ಸಮನಾದ ಮೊತ್ತಕ್ಕೆ ಬ್ಯಾಂಕ್ ಡಿ.ಡಿ ಅಥವಾ ನಗರಸಭೆಗೆ ಪಾವತಿಸಿದ ರಶೀದಿಯನ್ನು ಲಗತ್ತಿಸತಕ್ಕದ್ದು. (ಕವರಿನ ಒಳಗಡೆ ಇಡತಕ್ಕದ್ದಲ್ಲ) ಮಳಿಗೆಗಳನ್ನು **ದಿನಾಂಕ:04/01/2007 ರಂದು ಬೆಳಿಗ್ಗೆ 11-00 ಘಂಟೆಗೆ** ಕಛೇರಿಯ ಆವರಣದಲ್ಲಿ ಮರು ಪಾವತಿ ಇಲ್ಲದ ಠೇವಣಿ ನಿಗಧಿಪಡಿಸುವ ಬಗ್ಗೆ ಬಹಿರಂಗವಾಗಿ ಹರಾಜು ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸುವವರು ಮರು ಪಾವತಿ ಇಲ್ಲದ ಪ್ರಿಮಿಯಂ ಹಣವನ್ನು ಛಡ ಸವಾಲ್ ಮೂಲಕ ನಿಗಧಿ ಪಡಿಸಿಕೊಳ್ಳತಕ್ಕದ್ದು. ಹರಾಜ್ ಪ್ರಕ್ರಿಯೆ ಮುಗಿದ ನಂತರ ಟೆಂಡರ್ ಕವರುಗಳನ್ನು ತೆರೆಯಲಾಗುವುದು. ಟೆಂಡರ್ ಹಾಗೂ ಹರಾಜಿನ ಅಂತಿಮ ಬಿಡ್ ಮೊತ್ತಗಳಲ್ಲಿ ಯಾವುದು ಬಾಡಿಗೆ ಹಾಗೂ ಪ್ರಿಮಿಯಂ ಹಣ ಎರಡೂ ಹೆಚ್ಚು ಇರುವಂತಹ ಟೆಂಡರ್/ಬಿಡ್‌ನ್ನು ಪರಿಗಣಿಸಲಾಗುವುದು. ಟೆಂಡರ್/ಹರಾಜ್ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

### ಐ.ಡಿ.ಎಸ್.ಎಂ.ಟಿ ಮಳಿಗೆಗಳ ವಿವರ

| ಕ್ರ.ಸಂ. | ಮಳಿಗೆಗಳ ಸಂಖ್ಯೆ | ಮಳಿಗೆಗಳ ಅಳತೆ | ಮೂಲ ಮೌಲ್ಯದಂತೆ ನಿಗದಿ ಮೌಲ್ಯ+ಕಟ್ಟಡ ಮೌಲ್ಯದ ಮೇಲೆ ಶೇ.7.5ರಷ್ಟು ಮಾಹೆಯಾನ ಬಾಡಿಗೆ ರೂ. |
|---|---|---|---|
| **ನೆಲ ಅಂತಸ್ತಿನ ಮಿನಿ ಮಳಿಗೆ** | | | |
| 1 | - 1 - | 8X6 = 48 ಚ.ಅ | ರೂ 437-00 |
| 2 | - 2 - | 8X6 = 48 ಚ.ಅ | ರೂ 437-00 |
| 3 | - 3 - | 8X6 = 48 ಚ.ಅ | ರೂ 437-00 |
| 4 | - 4 - | 8X6= 48 ಚ.ಅ | ರೂ 437-00 |
| 5 | - 5 - | 8X6 = 48 ಚ.ಅ | ರೂ 437-00 |
| 6 | - 6 - | 8X6 = 48 ಚ.ಅ | ರೂ 437-00 |
| 7 | - 7 - | 8X6 = 48 ಚ.ಅ | ರೂ 437-00 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 8 | – 8 – | 8X6 = 48 ಚ.ಅ | ರೂ 437–00 |
| 9 | – 9 – | 8X6 = 48 ಚ.ಅ | ರೂ 437–00 |
| 10 | – 10 – | 8X6 = 48 ಚ.ಅ | ರೂ 437–00 |
| 11 | – 11 – | 8X6 = 48 ಚ.ಅ | ರೂ 437–00 |
| 12 | – 12 – | 8X6 = 48 ಚ.ಅ | ರೂ 437–00 |
| 13 | – 13 – | 8X6 = 48 ಚ.ಅ | ರೂ 437–00 |
| 14 | – 14 – | 8X6 = 48 ಚ.ಅ | ರೂ 437–00 |



| ಮೊದಲ ಅಂತಸ್ತಿನ ದೊಡ್ಡ ಸೈಜಿನ ಮಳಿಗೆಗಳು | | | |
|---|---|---|---|
| 15 | – 1 – | 39X15 = 585 ಚ.ಅ | ರೂ 3480 – 00 |
| 16 | – 2 – | 39X28 = 1092 ಚ.ಅ | ರೂ 6552 – 00 |
| 17 | – 3 – | 16X28 = 448 ಚ.ಅ | ರೂ 2688 – 00 |
| 18 | – 4 – | 39X29 = 1131 ಚ.ಅ | ರೂ 6786 – 00 |
| 19 | – 5 – | 39X15 = 585 ಚ.ಅ | ರೂ 3480 – 00 |
| 20 | – 6 – | 39X28 = 1092 ಚ.ಅ | ರೂ 6552 – 00 |
| ನೆಲ ಅಂತಸ್ತಿನ ಮುಂಭಾಗದ ದೊಡ್ಡ ಸೈಜಿನಮಳಿಗೆಗಳು | | | |
| 21 | – 13 – | 15X9 = 135 ಚ.ಅ | ರೂ 1228 – 00 |
| 22 | – 15 – | 15X9 = 135 ಚ.ಅ | ರೂ 1228 – 00 |
| ನಗರಸಭಾ ಕಾರ್ಯಾಲಯದ ಮುಂಭಾಗದ ಐ.ಡಿ.ಎಸ್.ಎಂ.ಟಿ. ಮಳಿಗೆ (ಪಶ್ಚಿಮ ದಿಕ್ಕು) | | | |
| 23 | – 1ಬಿ – | 13X23 = 299 ಚ.ಅ | ರೂ 2720 – 00 |

## ಮಳಿಗೆಗಳಿಗೆ ಸಂಬಂಧ ಪಟ್ಟಂತೆ ಈ ಕೆಳಕಂಡಂತೆ ಷರತ್ತುಗಳನ್ನು ನಮೂದಿಸಿದೆ.

## –: ಷರತ್ತುಗಳು :–

1 ಛಡ ಸವಾಲುದಾರರು/ಟೆಂಡರ್‌ದಾರರು ಮರು ಪಾವತಿ ಇಲ್ಲದ ಪ್ರಿಮಿಯಂ ಹಣವನ್ನು ಪೂರ್ತಿಯಾಗಿ ಆ ದಿನವೇ ಪಾವತಿಸತಕ್ಕದ್ದು.

2 ಮಳಿಗೆಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡುವ ಅವಕಾಶವಿಲ್ಲ. ಹಾಗೂ ಮಳಿಗೆಗೆ ಧಕ್ಕೆ ಆಗತಕ್ಕಂತಹ ರಾಸಾಯಿನಿಕ ಪದಾರ್ಥಗಳನ್ನು ಇಡತಕ್ಕದ್ದಲ್ಲ.

3 ಮಳಿಗೆಯನ್ನು ಸ್ವಾಧೀನಕ್ಕೆ ಪಡೆಯುವ ಪೂರ್ವದಲ್ಲಿ ಹರಾಜ್ ಅನುಮೋದಿಸದ 3 ತಿಂಗಳ ಬಾಡಿಗೆಯನ್ನು ಮುಂಗಡವಾಗಿ ಪಾವತಿಸತಕ್ಕದ್ದು.

4 ಬಹಿರಂಗ ಹರಾಜು/ಟೆಂಡರ್ ಮೂಲಕ ನಿಗಧಿಯಾದ ನಾನ್ ರಿಫಂಡಬಲ್ ಪ್ರಿಮಿಯಂ ಹಣವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.

5 ಹರಾಜಿನಲ್ಲಿ ಮಳಿಗೆಯನ್ನು ಪಡೆದವರೇ ಅದನ್ನು ಉಪಯೊಗಿಸಬೇಕು. ಬೇರೆಯವರಿಗೆ ಬಾಡಿಗೆಯಂತೆ ಆಗಲಿ ಅಥವಾ ಬೇರೆ ರೂಪದಲ್ಲಾಗಲೀ ಪರಭಾರೆ ಮಾಡಬಾರದು.

6 ಮಳಿಗೆಯ ಸುಣ್ಣ, ಬಣ್ಣ ಹಾಗೂ ಸಣ್ಣಪುಟ್ಟ ರಿಪೇರಿಯನ್ನು ಬಾಡಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಬೇಕು.

PDF Created with deskPDF PDF Writer - Trial :: http://www.docudesk.com

7 ಇದರಲ್ಲಿ ಉಪಯೋಗಿಸಿದ ವಿದ್ಯುತ್ ಬಿಲ್ಲಿನ ಹಣವನ್ನು ಬಾಡಿಗೆದಾರರೇ ಪಾವತಿಸಬೇಕು.

8 ಹರಾಜನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.

9 ಮಳಿಗೆಯಲ್ಲಿ ನಡೆಸುವ ಉದ್ದಿಮೆ ಮಾಡುವವರು ನಿಯಮಗಳಂತೆ ನಗರಸಭೆಯ ಲೈಸೆನ್ಸ್ ಪಡೆಯಬೇಕು.

10 ಮಳಿಗೆಯನ್ನು ಸ್ವಾಧೀನಕ್ಕೆ ಪಡೆಯುವ ಪೂರ್ವದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಬಾಡಿಗೆ ಕರಾರು ಪತ್ರವನ್ನು ನೊಂದಾಯಿಸಿಕೊಡತಕ್ಕದ್ದು.

11 ಬಾಡಿಗೆ ಹಣವನ್ನು ಪಾವತಿಸುವ ಬಗ್ಗೆ ಮತ್ತು ಮಳಿಗೆಯನ್ನು ತೆರವು ಮಾಡಿಸುವ ಸಂದರ್ಭಗಳಲ್ಲಿ ನಗರಸಭೆ ವಿರುದ್ಧ ನ್ಯಾಯಾಲಯದಲ್ಲಿ ಯಾವುದೇ ದಾವೆ ಹಾಕುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಡಬೇಕು. ಹಾಗೂ ಮಳಿಗೆ ವಿಷಯದಲ್ಲಿ ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈಗಲೇ ಇತ್ಯರ್ಥ ಪಡಿಸಿಕೊಳ್ಳಬೇಕು. ಆನಂತರ ನೀವು ಮಾಡುವ ತಕರಾರುಗಳಿಗೆ ನಗರಸಭೆ ಬಾದ್ಯಸ್ತೆ ಆಗುವುದಿಲ್ಲ.

12 ಅವಧಿಗೆ ಮುನ್ನ ಮಳಿಗೆಯನ್ನು ನಗರಸಭೆ ಸುಪರ್ಧಿಗೆ ನೀಡಿದ್ದಲ್ಲಿ ಮರು ಹಾರಾಜು ಮಾಡಲಾಗುವುದು. ಮರು ಹರಾಜಿನಲ್ಲಿ ಮೊದಲಿನ ಹರಾಜು ಮೊತ್ತಕ್ಕಿಂತ ಕಡಿಮಡಯಾದಲ್ಲಿ ವ್ಯತ್ಯಾಸವಾದ ಹಣವನ್ನು ನಿಮ್ಮಿಂದ ವಸೂಲಿ ಮಾಡಲಾಗುವುದು.ಒಂದು ವೇಳೆ ಹರಾಜಿನಲ್ಲಿ ಹರಾಜು ಮೊತ್ತವು ಹೆಚ್ಚಾದಲ್ಲಿ ಅದರಲ್ಲಿ ನಿಮಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ.

13 ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಐ.ಡಿ.ಎಸ್.ಎಂ.ಟಿ.:ಸಿಆರ್. 26/04–05 ದಿನಾಂಕ 25–04–2005ರ ಆದೇಶದಂತೆ ಗುತ್ತಿಗೆಯ ಅವಧಿಯು 20 ವರ್ಷಕ್ಕೂ ಕಡಿಮೆ ಇಲ್ಲದಂತೆ ನಿಗಧಿಪಡಿಸಲಾಗಿರುತ್ತದೆ. ಮತ್ತು ಮಳಿಗೆಗಳ ಸದರಿ ಬಾಡಿಗೆಯನ್ನು ಪ್ರತಿ 3 ವರ್ಷಗಳಗೊಮ್ಮೆ ಬಾಡಿಗೆಯ ಶೇ. 10ರಷ್ಟು ಹೆಚ್ಚಿಸಲಾಗುತ್ತದೆ.

14 ಹರಾಜಿನ ಸಮಯದಲ್ಲಿ ಹೆಚ್ಚಿನ ಷರತ್ತುಗಳನ್ನು ವಿಧಿಸುವ ಹಕ್ಕನ್ನು ಪೌರಾಯುಕ್ತರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
ಎಂ.ಬಿ.ದ್ಯಾಬೇರಿ, ಭಾ.ಆ.ಸೇ.
ಛೇರ್ಮನ್ನರು, ಐ.ಡಿ.ಎಸ್.ಎಂ.ಟಿ.
ಹಾಗೂ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ. ದಾವಣಗೆರೆ.

ಸಹಿ/–
ಪೌರಾಯುಕ್ತರು,
ನಗರಸಭೆ, ಹರಿಹರ.

PDF Created with deskPDF PDF Writer - Trial :: http://www.docudesk.com